ಕಥೆ



## ಜಿ.ವಿ.ಆನಂದಮೂರ್ತಿ

ಕಲೆ: ರಾಮಕೃಷ್ಣ ಸಿದ್ರಪಾಲ



# ಸಣ್ಣತಿಮ್ಮಯ್ಯನ ಬಿಳಿಕುರಿ

ಸುತ್ತಲೂ ರಣರಣ ಬಿಸಿಲು. ಬಿಸಿಲಿನ ಧಗೆಗೆ ಇಡೀ ಹೊಲಮಾಳ ಬಸವಳಿದಿತ್ತು. ಸುತ್ತಮುತ್ತಲೂ ಇದ್ದ ಮರಗಳಲ್ಲಿ ಒಂದು ಎಲೆಯೂ ಅಲುಗುತ್ತಿರಲಿಲ್ಲ. ಹೊಲದ ಒಂದು ಮೂಲೆಯಲ್ಲಿ ತನ್ನ ಅಪ್ಪ ಗಿರಿಗೌಡನ ಗುಡ್ಡೆಯ (ಸಮಾಧಿ) ಮುಂದಿದ್ದ ಹೊಂಗೆಮರದ ಅಡಿಯಲ್ಲಿ ಈಸಲು ಚಾಪೆಯಂತೆ ಹಾಸಿದ್ದ ಹೊಂಗೆ ಹೂವಿನ ಮೇಲೆ ಸಣ್ಣತಿಮ್ಮಯ್ಯ ಏಕಾಂಗಿಯಾಗಿ ಕುಳಿತಿದ್ದ. ಹೊಂಗೆಮರದ ಕಂಡಿಯಿಂದ ತೂರಿ ಬರುತ್ತಿದ್ದ ಬೆಳಕಿನ ಕೋಲುಗಳು ಸಣ್ಣತಿಮ್ಮಯ್ಯ ಮತ್ತು ಗುಡ್ಡೆಯ ಮೇಲೆ ನೆರಳು ಬೆಳಕಿನ ಚಿತ್ತಾರವನ್ನು ಬಿಡಿಸಿದ್ದವು. ಗುಡ್ಡೆಯ ಪಕ್ಕದಲ್ಲೇ ಖಾಲಿಯಾಗಿದ್ದ ಕುರಿಗೂಡು ಪಳೆಯುಳಿಕೆಯಂತೆ ಅಲ್ಲಿತ್ತು. ತನ್ನ ಕಣ್ಣುಗಳು ದಣಿದಾಗ ತಿಮ್ಮಯ್ಯ ಕುರಿಗೂಡಿನ ಕಡೆಯೂ ಒಮ್ಮೊಮ್ಮೆ ನೋಡಿ ಕಣ್ಣಿನ ಭಾರಕ್ಕೆ ತಲೆ ತಗ್ಗಿಸಿಕೊಳ್ಳುತ್ತಿದ್ದ. ಹೊತ್ತು ಹುಟ್ಟಿದ ನಂತರ ಹಟ್ಟಿಯ ಮುಂದೆ ಕುಳಿತಿರುತ್ತಿದ್ದ. ಅವನ ಕಣ್ಣುಗಳು ಕಾಣದ ದಿಕ್ಕಿನ ಕಡೆಗೆ ದಿಟ್ಟಿಸಿ ನೋಡುತ್ತಿದ್ದವು. ಹುಟ್ಟಿದ ಸೂರ್ಯ ತುಸು ಸುಡುವ ಮುಂಚೆ ಅಗಲಿಗಿಟ್ಟದ್ದನ್ನು ತಿಂದು ಹಟ್ಟಿ ದಾಟಿ ಹೊಲಕ್ಕೆ ಬರುತ್ತಿದ್ದ. ನೀಳವಾಗಿದ್ದ ಅವನ ನೆರಳು ನಡುಗುತ್ತಾ ಅವನನ್ನು ಹಿಂಬಾಲಿಸುತ್ತಿತ್ತು. ಹಟ್ಟಿಗೌಡನಾಗಿದ್ದ ತನ್ನ ಅಪ್ಪನ ಗುಡ್ಡೆಯ ಬಳಿಗೆ ಬಂದು ಕುಳಿತುಕೊಳ್ಳುತ್ತಿದ್ದ. ಪಡವಲು ಕಂತಿದ ಮೇಲೆ ಮಗ ಶಿವಣ್ಣ ಬಂದು ಕರೆದುಕೊಂಡು ಹೋದಾಗಲೇ ಅವನು ಮತ್ತೆ ಹಟ್ಟಿಗೆ ಮರುಳುತ್ತಿದ್ದುದು. ಇದು ಹೀಗೆಯೇ ಹಲವಾರು ವರ್ಷಗಳಿಂದ ವಾಡಿಕೆಯಂತೆ ನಡೆದುಕೊಂಡು ಬಂದಿತ್ತು.

ತನ್ನ ಪ್ರೀತಿಪಾತ್ರ ಬಿಳಿಕುರಿಯ ಹೊರತು ಹೊರ ಜಗತ್ತಿನ ಇನ್ನಾವ ವಿದ್ಯಮಾನಗಳೂ ತಿಮ್ಮಯ್ಯನನ್ನು ಅಲುಗಾಡಿಸುತ್ತಿರಲಿಲ್ಲ! ನೆಲದ ಕಡೆ ಬಾಗಿ ಹಣ್ಣಾಗಿದ್ದ ದೇಹ ಅದು. ಎದೆಯ ಮೇಲೆ ಹಂಚಿಕಡ್ಡಿಯ ಊಬಿನಂತಿದ್ದ ಬಿಳಿ ಮಂಜಿನಂಥ ಕೂದಲು. ನೆತ್ತಿಮೇಲೂ ತೆಳ್ಳಗಿದ್ದ ಅಂಥದ್ದೇ ಕೂದಲು ಅವನ ವಯಸ್ಸನ್ನು ಸಾರಿ ಹೇಳುತ್ತಿತ್ತು. ಉರಿಯುತ್ತಿದ್ದ ಬಿಸಿಲಿನ ಝಳಕ್ಕೆ ಅವನ ಪೊರೆಬಂದಿದ್ದ ಕಣ್ಣುಗಳು ಅರೆಮುಚ್ಚಿಕೊಂಡಿದ್ದವು. ಮುಖದ ಮೇಲೆ ಸುಕ್ಕುಗಟ್ಟಿದ್ದ ಚರ್ಮದ ಮೇಲಿಂದ ಬೆವರು ಜಿನುಗುತ್ತಿತ್ತು. ಇದರಿಂದಾಗಿ ಅವನ ಮುಖ